## 1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ನಂಜನಗೂಡು

**ಸಿ.ಸಿ.ಸಂಖ್ಯೆ: 2004/2014**

ಫಿರ್ಯಾದಿ : ಬದನವಾಳು ಆರಕ್ಷಕ ಠಾಣೆ

**ವಿರುದ್ಧ**

ಆರೋಪಿ : ಹೆಚ್ ಆರ್ ಮಹೇಶ ಬಿನ್ ರಂಗನಾಯಕ,
ಸುಮಾರು 26 ವರ್ಷ,
ವಾಸ: ತಿಪ್ಪೂರ್ ಗ್ರಾಮ , ಹುಣಸೂರು ತಾಲ್ಲೂಕು .

**: ಆಪಾದನೆ :**

ದಿನಾಂಕ 10.06.2014 ರಂದು ಸಂಜೆ **04.00** ಗಂಟೆ ಸಮಯದಲ್ಲಿ ಬದನವಾಳು ಆರಕ್ಷಕ ಠಾಣಾ ಸರಹದ್ದಿಗೆ ಸೇರಿದ ನಂಜನಗೂಡು-ಟಿ.ನರಸೀಪುರ ಮುಖ್ಯ ರಸ್ತೆ ಕಲ್ಲುಂದ ಗೇಟ್ ಹತ್ತಿರ ವೆಂಕಟೇಶ ಎಂಬುವವರ ಬಾಬ್ತು ಕೆಎ-05-ಇಬಿ-8697 ಬಜಾಜ್ ಕ್ಯಾಲಿಬರ್ ಬೈಕ್ ನಲ್ಲಿ ನಂಜನಗೂಡು ಕಡೆಯಿಂದ ಟಿ.ನರಸೀಪುರ ಕಡೆಗೆ ಹೋಗುತ್ತಿದ್ದಾಗ ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎ-55-3288 ಟಾಟಾ ಗೂಡ್ಸ್ ವಾಹನವನ್ನು ಟೀ.ನರಸೀಪುರ ಕಡೆಯಿಂದ ನಂಜನಗೂಡು ಕಡೆಗೆ ಸಾರ್ವಜನಿಕ ರಸ್ತೆಯಲ್ಲಿ ಅತಿವೇಗವಾಗಿ ಮತ್ತು ಅಜಾಗರೂಕತೆಯಿಂದ ಮನುಷ್ಯನ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ವೆಂಕಟೇಶ್ ರವರಿಗೆ ಡಿಕ್ಕಿ ಮಾಡಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ. 279 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇತೆಯಲ್ಲಿ ಎಸಗಿರುತ್ತೀರಿ.

ಎರಡನೆಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯಾದ ನೀವು ನಿಮ್ಮ ಬಾಬ್ತು ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಹಾಗೂ ಮಾನವೀಯ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ವೆಂಕಟೇಶರವರಿಗೆ ಡಿಕ್ಕಿ ಮಾಡಿದ ಪರಿಣಾಮ ಅವರ ಬಲ ಕಾಲಿನ ಮಂಡಿಗೆ ಹಾಗೂ ತಲೆಗೆ ತೀವ್ರ ಸ್ವರೂಪದ ಗಾಯಗಳಾಗಿ ಸ್ಥಳದಲ್ಲೇ ಮೃತರಾದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 304 (A) ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇತೆಯಲ್ಲಿ ಎಸಗಿರುತ್ತೀರಿ.

ಮೂರನೇಯದಾಗಿ, ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಗಾಯಾಳುವಿಗೆ ಚಿಕಿತ್ಸೆ ಕೊಡಿಸದೆ, ಅಪಘಾತದ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡದೆ ಹೊರಟು ಹೋದ ಕಾರಣ ಭಾರತೀಯ ಮೋಟಾರು ವಾಹನ ಕಾಯ್ದೆ 187 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಕೊನೆಯದಾಗಿ,ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಬಾಬ್ತು ವಾಹನ ಕೆಎ-55-3288 ಟಾಟಾ ಗೂಡ್ಸ್ ವಾಹನಕ್ಕೆ ವಿಮೆ ಮಾಡಿಸಿಲ್ಲದ ಕಾರಣ ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 146 ಸಹವಾಚಕ 196 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಈ ಮೇಲ್ಕಂಡ ಆರೋಪಗಳ ಬಗ್ಗೆ ವಿಚಾರಣೆಗೆ ಈ ಕೆಳಕಂಡಂತೆ ಆದೇಶಿಸುತ್ತೇನೆ.

ಪ್ರಶ್ನೆ-1 ಃ ಮೇಲ್ಕಂಡ ಎಲ್ಲಾ ಆಪಾದನೆಯನ್ನು ಓದಿ ಹೇಳಿದ್ದು ಅರ್ಥವಾಯಿತೇ?
ಉತ್ತರ ಃ ಅರ್ಥವಾಯಿತು

ಪ್ರಶ್ನೆ-2 ಃ ಸದರೀ ಆಪಾದನೆಯನ್ನು ಒಪ್ಪಿಕೊಳ್ಳುವೆಯೋ? ಅಥವಾ ವಿಚಾರಣೆಯಾಗ ಬೇಕೋ?

ಉತ್ತರ ಃ ತಪ್ಪು ಮಾಡಿಲ್ಲ , ವಿಚಾರಣೆಯಾಗಬೇಕು.

ಮೇಲ್ಕಂಡ ಎಲ್ಲಾ ಆಪಾದನೆಯನ್ನು ನನ್ನ ಸಮಕ್ಷಮ ಓದಿ ಹೇಳಿ ಆತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

24.10.19

ದಿನಾಂಕಃ 24-10-2019
ಸ್ಥಳ ಃ ನಂಜನಗೂಡು

1ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು

ವೆಂಕಟೇಶ